ಕರ್ನಾಟಕ ರಾಜ್ಯ ಹೆದ್ದಾರಿ ಪ್ರಾಧಿಕಾರ ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ,
ಲೋಕೋಪಯೋಗಿ ಇಲಾಖೆ, ಬೀದರ ವಿಭಾಗ, ಬೀದರ

## ಪ್ರಕಟಣೆ.

ಸಂ. ಕಾನಿ/ಇಂಜಾ/ಲೋಇ/ಬೀದರ /ಎಸ್‌ಟಿಎಸ್‌ರಾಜ್ಯ ಹೆದ್ದಾರಿ ನಿಯಮ-7(1) ಪ್ರಕಟಣೆ /2002-03/289 ದಿನಾಂಕ 10-5-2002

ವಿಷಯ : ಕರ್ನಾಟಕ ರಾಜ್ಯ ಹೆದ್ದಾರಿ ಅಧಿನಿಯಮ 1964 ರಲ್ಲಿನ ಸೆಕ್ಷನ್ 7(1) ಅಂತಿಮ ಮತ್ತು 8 ರಂತೆ ರಾಜ್ಯ ಹೆದ್ದಾರಿಗಳಲ್ಲಿ ಹಾದು ಹೋಗುವ ಆಕ್ಷೇಪಣೆ ರಹಿತ ಸ್ಥಳಗಳಲ್ಲಿ ರಸ್ತೆಯ "ಗಡಿರೇಖೆ ಕಟ್ಟಡ ರೇಖೆ ಹಾಗೂ ನಿಯಂತ್ರಣ ರೇಖೆ" ನಿಗದಿಪಡಿಸುವ ಬಗ್ಗೆ

ಉಲ್ಲೇಖ: 1. ಪಿಡಬ್ಲ್ಯುಡಿ/362 /ಸಿಆರ್‌ಎಂ/98, ಬೆಂಗಳೂರು ದಿನಾಂಕ 6-10-1998.
2. ಪಿಡಬ್ಲ್ಯುಡಿ/103 /ಸಿಎಸ್‌ಎಚ್/99-2001, ಬೆಂಗಳೂರು ದಿನಾಂಕ 6-6-2001
3. ಪಿಡಬ್ಲ್ಯುಡಿ/44/ಸಿಆರ್‌ಎಂ/1999, ಬೆಂಗಳೂರು ದಿನಾಂಕ 28-6-2001.
4. 1. ಕಾನಿಇಂ/ಬೀ/ಲೋಇ/2000-01/961. ದಿ. 28-6-2001.
2. ಸಂ. ಕಾನಿ/ಇಂ/ಬೀ/ಲೋಇ/ಡಿಬಿ/ಎಸ್‌ಟಿಎಸ್/1999-2000 /1581 ದಿ. 23-8-2000.
3. -ಸದರಿ- 1582. ದಿನಾಂಕ 23-8-2000.
4. ಸಂ. ಕಾನಿಇಂ/ಬಿ/ಲೋಇ/1999-00/4026, ದಿನಾಂಕ 29-3-2000

ರಾಜ್ಯ ಸರ್ಕಾರದ ಆದೇಶ ದಿನಾಂಕ 9-10-1998 ರಲ್ಲಿ ಹೆದ್ದಾರಿಗಳಲ್ಲಿ "ಗಡಿರೇಖೆ ಕಟ್ಟಡರೇಖೆ ಹಾಗೂ ನಿಯಂತ್ರಣ ರೇಖೆ" ಇವುಗಳನ್ನು ನಿಗದಿಪಡಿಸಲಾಗುತ್ತದೆ. ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ 1964ರಲ್ಲಿನ ಸೆಕ್ಷನ್ 7(i) ರ ಅನ್ವಯ ರಾಜ್ಯ ಹೆದ್ದಾರಿಗಳಲ್ಲಿ ಗಡಿರೇಖೆ ಕಟ್ಟಡ ರೇಖೆ ಹಾಗೂ ನಿಯಂತ್ರಣ ರೇಖೆ ಇವುಗಳನ್ನು ನಿಗದಿಪಡಿಸಿ ಅಂತಿಮವಾಗಿ ಪ್ರಕಟಿಸಿ ಘೋಷಿಸಲಾಗಿದೆ.

ಮೇಲ್ಕಂಡ ಸರ್ಕಾರದ ಆದೇಶ ಉಲ್ಲೇಖ (1) ಮತ್ತು ಈ ಕಚೇರಿಯ ಪ್ರಕಟಣೆಯಂತೆ ಉಲ್ಲೇಖ (4) ಈ ಬಗ್ಗೆ ಸಾರ್ವಜನಿಕರ ಆಕ್ಷೇಪಣೆ ಇದ್ದಲ್ಲಿ ಪ್ರಕಟಣೆಯಾದ ದಿನಾಂಕದಿಂದ 60 ದಿವಸದೊಳಗಾಗಿ ಆಕ್ಷೇಪಣೆಗಳನು ನೀಡಬಹುದಾಗಿತ್ತೆಂದು ತಿಳಿಯಪಡಿಸಲಾಗಿತ್ತು. ಅದರಂತೆ ರಾಯಚೂರು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ,

1. ರಾಜ್ಯ ಹೆದ್ದಾರಿ ಸಂಖ್ಯೆ 19 ಶ್ರೀರಂಗಪಟ್ಟಣದಿಂದ ಪ್ರಾರಂಭವಾಗಿ ಬೀದರ್‌ಗೆ ಸಂಪರ್ಕಿಸುವ ರಾಜ್ಯ ಹೆದ್ದಾರಿ ಕಿಮೀ. 650. 80 ರಿಂದ 663.80ರ ವರೆಗೆ ಕಿಮೀ. 666.80 ರಿಂದ 712.20 ವರೆಗೆ
2. ರಾಜ್ಯ ಹೆದ್ದಾರಿ ಸಂಖ್ಯೆ4 ಜಹೀರಾಬಾದ - ನಾಂದೇಡ ರಾಜ್ಯ ಹೆದ್ದಾರಿ ಕಿಮೀ. 19.10 ರಿಂದ 88.20 ವರೆಗೆ
3. ರಾಜ್ಯ ಹೆದ್ದಾರಿ ಸಂಖ್ಯೆ15 ವನಮಾರಪಲ್ಲಿ - ರಾಯಚೂರು ರಸ್ತೆ ಕಿಮೀ. 0.00 ರಿಂದ 90.60 ರ ವರೆಗೆ
4. ರಾಜ್ಯ ಹೆದ್ದಾರಿ ಸಂಖ್ಯೆ 11 ಸ್ಟೇಟ್ ಬಾರ್ಡರ್ ದಿಂದ ಹುಲಸೂರು, ಮುಡಬಿ ಮಹಾಗಾಂವ ರಾಜ್ಯ ಹೆದ್ದಾರಿ ಕಿಮೀ. 0.00 ದಿಂದ 56.70 ವರೆಗೆ

ಮೇಲ್ಕಂಡ ರಾಜ್ಯ ಹೆದ್ದಾರಿಗಳಲ್ಲಿ ಈ ಕಚೇರಿ ಪ್ರಕಟಣೆ ಉಲ್ಲೇಖ (4) ರಲ್ಲಿ ಇದ್ದಂತೆ ಆಕ್ಷೇಪಣೆ ಇಲ್ಲದೇ ಇರುವ ಸ್ಥಳಗಳನ್ನು ಗುರುತಿಸಿ ಉಲ್ಲೇಖ (1) ರಂತೆ ಹಾಗೂ ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ 1964 ಅಧಿನಿಯಮ 7(1) ರನ್ವಯ ರಾಜ್ಯ ಹೆದ್ದಾರಿಗಳಲ್ಲಿ ರಸ್ತೆಯ ಗಡಿರೇಖೆ ಕಟ್ಟಡ ರೇಖೆ ಹಾಗೂ ನಿಯಂತ್ರಣ ರೇಖೆ ಇವುಗಳನ್ನು ಈ ಕೆಳಗಿನಂತೆ ನಿಗದಿಪಡಿಸಿ ಘೋಷಿಸಲಾಗಿದೆ.

**ರಾಜ್ಯ ಹೆದ್ದಾರಿ ಮಧ್ಯಭಾಗದಿಂದ**

| ಕ್ರ.ಸಂ. | ವಿವರಣೆ | ರಸ್ತೆ ಗಡಿ ರೇಖೆ ಮೀಟರುಗಳಲ್ಲಿ | ಕಟ್ಟಡ ರೇಖೆ ಮೀಟರುಗಳಲ್ಲಿ | ನಿಯಂತ್ರಣ ರೇಖೆ ಮೀಟರುಗಳಲ್ಲಿ |
|---|---|---|---|---|
| 1. | ಗ್ರಾಮ, ಪಟ್ಟಣ ಮತ್ತು ನಗರ ಪ್ರದೇಶಗಳನ್ನು ಹೊರತು ಪಡಿಸಿದ ಭಾಗಗಳಲ್ಲಿ | 22.50 ಮೀ. ✓ | 40.00 ಮೀ. | 75.00 ಮೀ. |

ಮುಂದುವರೆಸುತ್ತಾ ಆಕ್ಷೇಪಣೆ ರಹಿತ ರಾಜ್ಯ ಹೆದ್ದಾರಿ ಪ್ರದೇಶಗಳಲ್ಲಿ "ಗಡಿರೇಖೆ ಕಟ್ಟಡ ರೇಖೆ ಹಾಗೂ ನಿಯಂತ್ರಣ ರೇಖೆ" ಇವುಗಳನ್ನು ನಿಗದಿಪಡಿಸಿ ಹಾಗೂ ಸೆಕ್ಷನ್ 8 ರಂತೆ ಸದರಿ ರಸ್ತೆಗೆ ನಕ್ಷೆ ತಯಾರಿಸಲಾಗಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಜಿಲ್ಲೆಯ ರಾಜ್ಯ ಹೆದ್ದಾರಿ ಪ್ರಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಬೀದರ ವಿಭಾಗ, ಬೀದರ ಇವರನ್ನು ಸಂಪರ್ಕಿಸಬಹುದು.

ಬೀದರ ಜಿಲ್ಲೆಯ ರಾಜ್ಯ ಹೆದ್ದಾರಿಯಲ್ಲಿ ಮೇಲ್ಕಂಡ ಪ್ರಕಟಣೆಗೆದುರಾಗಿ ಆಕ್ಷೇಪಣೆ ಇಲ್ಲದಿರುವ ಸ್ಥಳ ಜಮೀನಿನ ವಿವರಗಳು ಈ ಪ್ರಕಟಣೆಯೊಂದಿಗೆ ಅನುಬಂಧ - ಅ ರಲ್ಲಿ ತೋರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-
**(ಹೆಚ್. ಪುಂಡಲೀಕ)**
ರಾಜ್ಯ ಹೆದ್ದಾರಿ ಪ್ರಾಧಿಕಾರ ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಬೀದರ ವಿಭಾಗ, ಬೀದರ

ಪ್ರ. 416-25 ಹೆ.ಪ್ರ. 6-6-2002

Scanned by CamScanner